(ಶ್ರೀ ಬಿ. ಹುಚ್ಚೇಗೌಡರು)

ಪ್ರತಿಯೊಬ್ಬನಿಗೂ ಅವನ ಮನೆಯಲ್ಲಿ ಕಲಸಮಾಡುವುದಕ್ಕೆ, ಅವನಿಗೆ ಉಪಕಸುಬು ಮಾಡುವುದಕ್ಕೆ ಅವಕಾಶ ವಿದೆ. ಸಣ್ಣ ಮಕ್ಕಳು ಮೂರು ವರ್ಷವಾದಾಗಿನಿಂದ ಮನೆ ಕೆಲಸಗಳನ್ನು ಮಾಡುತ್ತಿದ್ದಾರೆ. ಬೆಳಗಿನ ಹೊತ್ತು ಪಾಠ ನಡೆಸಿ ಹನ್ನೊಂದುಗಂಟೆಗೆ ಸ್ಕೂಲನ್ನು ಬಿಟ್ಟರೆ ಮನೆಗೆ ಹೋಗಿ ವ್ಯವಸಾಯದ ಕೆಲಸದಲ್ಲಿ ಮತ್ತು ಇತರ ಚಿಲ್ಲರೆ ಕಸಬುಗಳಲ್ಲಿ ತಂದೆತಾಯಿಗಳಿಗೆ ಸಹಾಯಮಾಡಬಹುದು. ವಾಸ್ತವವಾಗಿ ಈಗ ವಿದ್ಯಾಭ್ಯಾಸದ ತೆರಿಗೆಯನ್ನು ಕೊಟ್ಟರೂ, ಕಂದಾಯ ಕೊಟ್ಟರೂ ವಿದ್ಯಾಭ್ಯಾಸಕ್ಕೆ ಎಲ್ಲರಿಗೂ ಅವಕಾಶವಿಲ್ಲ.

ಶ್ರೀ ಟಿ. ಎಕ್. ಮೂಡ್ಲಗಿರಿಗೌಡರು (ಕುಣಿಗಲು) — On a point of order, Sir. ವಿದ್ಯಾಭ್ಯಾಸ ಪದ್ಧತಿಯನ್ನು ಯಾವ ರೀತಿಯಲ್ಲಿ ಬದಲಾಯಿಸಬೇಕೆಂಬುದಕ್ಕೆ ಸಲಹೆ ಕೊಟ್ಟರೆ ಅನುಕೂಲ, ಈಗ ಅವರು ಹೇಳುತ್ತಿರುವುದು ಸೂಕ್ತವಾಗಿ ಕಾಣುವುದಿಲ್ಲ.

ಉಪಾಧ್ಯಕ್ಷರು.—ಅವರು ಸಲಹೆಯನ್ನು ಕೊಡುವ ವಿಧಾನವೇ ಅದು.

ಶ್ರೀ ಬಿ. ಹುಚ್ಚೇಗೌಡರು.—ಮುಖ್ಯವಾದ ಉದ್ದೇಶ ವೇನೆಂದರೆ, ಈ ಬೇಸಿಕ್ ವಿದ್ಯಾಭ್ಯಾಸದಲ್ಲಿ ಯಾವ ವಿಧಾನ ಅನುಸರಿಸಬೇಕೆಂದಿದೆಯೋ ಆದೇರೀತಿ ಮಕ್ಕಳಿಗೆ ಮನೆ ಕೆಲಸ ಮಾಡಲು ಅವಕಾಶವಿರುವಂತೆ ಗ್ರಾಮಾಂತರಗಳಲ್ಲಿ ಪಾಠಶಾಲೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸಿ, ಮಧ್ಯಾಹ್ನದಲ್ಲಿ ವಿರಾಮಕೊಡುವುದರಿಂದ ಮನೆ ಕೆಲಸಮಾಡಿಕೊಳ್ಳುತ್ತಾರೆ. ಅದೂ ಅಲ್ಲದೆ ಬೇಕಾದಷ್ಟು ರಜಾದಿನಗಳೂ ಇವೆ. ಅವನ್ನು ಕಪಿಮೆಮಾಡಿದರೆ ಆಗಬೇಕಾದಷ್ಟು ಪಾಠಗಳು ನಡೆದುಹೋಗುತ್ತವೆ.

ಮತ್ತೊಂದು ವಿಚಾರ, ಮಕ್ಕಳಿಗೆ ಮಿಡ್ಲ್‌ಸ್ಕೂಲುಗಳಲ್ಲಿ 10—12 ಪುಸ್ತಕಗಳನ್ನಿಡುತ್ತಾರೆ. ಆದರೆ ಆ ಪುಸ್ತಕಗಳಲ್ಲಿ ನಾಲ್ಕು ಪಾಠಗಳನ್ನು ನಷ ಮಾಡುವುದಿಲ್ಲ. ಆದಷ್ಟುಮಟ್ಟಿಗೆ ಎಷ್ಟು ಸಾಧ್ಯವೋ ಅಷ್ಟು ಪುಸ್ತಕಗಳನ್ನಿಟ್ಟು ಪೂರ್ತಿಯಾಗಿ ಪಾಠಗಳನ್ನು ಮಾಡುವಂತೆ ಏರ್ಪಾಡುಮಾಡಬೇಕು. ಇನ್ನೊಂದು ಕ್ರೈಮರಿ ಮತ್ತು ಮಿಡ್ಲ್‌ಸ್ಕೂಲುಗಳೆರಡರ ವಿದ್ಯಾಭ್ಯಾಸವನ್ನೂ ಪೂರ್ತಿಯಾಗಿ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಅದನ್ನು ಸರ್ಕಾರದವರು ಕಡ್ಡಾಯವಾಗಿ ಮಾಡುವ ಹೊರೆ ಅವರಮೇಲಿದೆ. ಅದನ್ನು ನಿರ್ವಹಿಸಬೇಕಾದದ್ದು ಅವರ ಆದ್ಯ ಕರ್ತವ್ಯ. ಹೈಸ್ಕೂಲು ವಿದ್ಯಾಭ್ಯಾಸವನ್ನು ಸ್ಥಳೀಯ ಸಂಸ್ಥೆಗಳಾಗಲಿ ಅಥವಾ ಖಾಸಗಿಯವರಾಗಲಿ ನಡೆಸುವುದಕ್ಕೆ ಅವಕಾಶ ಕೊಡಬೇಕು. ಏಕೆಂದರೆ ಸರ್ಕಾರದವರೇ ನಡೆಸಬೇಕಾದರೆ ಬಹಳ ಖರ್ಚಾಗುತ್ತದೆ, ಖಾನಗಿ ಅಥವಾ ಏಡೆಡ್ ಸ್ಕೂಲುಗಳಾದರೆ, ಅದರಲ್ಲಿ ಅನೇಕ ವಿದ್ಯಾವಂತರು ತ್ಯಾಗಿಗಳಾಗಿ ಕಡಮೆ ಸಂಬಳಕ್ಕೆ ಕೆಲಸಮಾಡಿದರೆ, ಎಷ್ಟೋ ಉಳಿತಾಯ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ನಾನು ಮುಖ್ಯವಾಗಿ ಈ ಸಂದರ್ಭದಲ್ಲಿ ಹೇಳುವುದಿಷ್ಟೆ. ಈಗ ಎಷ್ಟೋ ಕಮಿಷನ್‌ಗಳು, ಸಾರ್ಜೆಂಟ್ ಯೋಜನೆ, ರಾಧಾಕೃಷ್ಣ ಯೋಜನೆ ಹೀಗೆ ಎಷ್ಟೋ ಆಗಿವೆ. ಆದರೆ ಯಾವುದೂ ಕಾರ್ಯಗತವಾಗುತ್ತಿಲ್ಲ. ಇದಕ್ಕೆ ಕಾರ್ಯಾಹಣ ಬೇಕು. ಆದ್ದರಿಂದ ಮುಖ್ಯವಾಗಿ ಪ್ರತಿಯೊಬ್ಬ ಮನುಷ್ಯನಿಗೂ ಪ್ರಾಥಮಿಕ ವಿದ್ಯೆ ಕೊಡುವ ಹೊರೆಯನ್ನು ಸರ್ಕಾರ ಹೊತ್ತರೂ ಬಾಕಿ ಹೈಸ್ಕೂಲು ಕಾಲೇಜುಗಳ ವಿದ್ಯೆ ಕೊಡುವ ಭಾರವನ್ನು ಖಾಸಗಿಯವರಿಗೆ ಬಿಡಬೇಕೆಂಬುದು ನನ್ನ ಸಲಹೆ. ಎಷ್ಟು ಸಾಧ್ಯವೋ ಅಷ್ಟನ್ನು ಯೋಜನೆಮಾಡಿ ಕಾರ್ಯರೂಪಕ್ಕೆ ತರಬೇಕು. ಹೈಸ್ಕೂಲು ಮತ್ತು ಮಿಡ್ಲ್‌ಸ್ಕೂಲು ವಿದ್ಯಾಭ್ಯಾಸವನ್ನು ಗ್ರಾಮಾಂತರಗಳಲ್ಲಿ ಸ್ಥಾಪಿಸಬೇಕು. ಅಲ್ಲಿ ವಿದ್ಯಾರ್ಥಿಗಳು ತಮ್ಮ ಸ್ವಂತ ಕಸಬನ್ನು ಮಾಡಿಕೊಳ್ಳುವುದಕ್ಕೆ, ಸ್ಕೂಲು ಬಿಟ್ಟಮೇಲೆ ಅವರ ಕಸಬು ಯಾವುದೋ ಅದನ್ನು ಕಲಿಯುವುದಕ್ಕೆ ಅವಕಾಶ ವಿರಬೇಕೇ ಹೊರತು ಅವರನ್ನು ತೆಗೆದುಕೊಂಡು ಬೇರೆ ಕಡೆ ಹಾಕಿ ಯಾವುದನ್ನೋ ಕಲಿ ಎಂದು ಹೇಳಿದರೆ ಮುಂದೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಒಂದುಹೊತ್ತು ಸ್ಕೂಲುಮಾಡಿ ಇನ್ನೊಂದುಹೊತ್ತಿನಲ್ಲಿ ಅವರ ಸ್ವಂತ ಕೆಲಸ ಮಾಡಿಕೊಳ್ಳುವುದಕ್ಕೆ ಅವಕಾಶವಿರಬೇಕು.

Mr. DEPUTY SPERKER –The House will now adjourn for lunch and meet at 3-30 p.m.

The House rose for lunch at Three of the Clock and reassembled at Thirty Minutes past Three of the Clock.

[MR. SPEAKER in the Chair]

Announcement of the Personnel of the Committee of Privileges for the Legislative Assembly.

Mr. SPEAKER.—The Chair desires to announce that till the last hour fixed for the receipt of candidature applications, four candidates had signified their intention to stand for election to the Committee of Privileges for the Legislative Assembly. As the number of candidates is equal to the number of places to be filled up, the following members are declared elected:—

Sri B. Rachiah,
Sri V. Venkatappa,
Sri P. R. Ramaiya, and
Sri G. A. Thimmappa Gowda.

Under sub-rule (2) of Rule 171 of the Rules of Procedure and Conduct of Business in the Mysore Legislative Assembly, I nominate the following three members to the Committee :—

Sri T. Mariappa,
Sri K. Pattabhiraman, and
Sri M. Rajasekhara Murthy.

Under sub-rule (3) of Rule 171 of the Rules, I appoint Sri T. Mariappa to be Chairman of the Committee.

Sri K. LAKKAPPA (Channarayapatna).—Sir, we have received T. A. forms today and we wish to know whether the Assembly will terminate tomorrow ?

Mr. SPEAKER.—There are a number of Bills for consideration tomorrow, some to be passed and some to be referred to Select Committees. There is business even for day after tomorrow. Therefore, for two days more we will have to meet.

Debate on Educational System now prevailing in the State.

Mr. SPEAKER.—Now debate on educational reforms in the State will continue. I must prescribe some time-limit.

Hon'ble MEMBERS.—Five minutes.

Mr. SPEAKER.—Yes.

ಶ್ರೀ ಎಸ್. ಗೋಪಾಲಗೌಡರು (ಸಾಗರ–ಹೊಸನಗರ).—ಅಧ್ಯಕ್ಷರೇ, ಸಭೆಯ ಮುಂದೆ ಮಹತ್ತ್ವರವಾದ ಮತ್ತು ಒಂದು ಘನವಾದ ವಿಷಯ ಚರ್ಚೆಗೆ ಬಂದಿದೆ. ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಸಲಹೆಗಳನ್ನು ಕೊಡುವುದಕ್ಕೆ ಮತ್ತು ಈಗಿರತಕ್ಕ ಎಲ್ಲಾ ನ್ಯೂನತೆಗಳನ್ನೂ ಸಭೆಯ ಮುಂದೆ ಇಡುವುದಕ್ಕೆ ನನಗೆ ಹೆಚ್ಚು ಕಾಲಾವಕಾಶವಿಲ್ಲದೆ ನಾನು ಆ ವಿಷಯವಲ್ಲಿ ತಜ್ಞ ನೇನೂ ಅಲ್ಲ; ನನಗೆ ತಿಳಿದ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಪ್ರತಿಪಾದಿಸಬೇಕು ಎಂದು ಇದ್ದೇನೆ. ಈಗಾಗಲೇ ಮಾನ್ಯ ಸದಸ್ಯರನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ವಿದ್ಯಾಭ್ಯಾಸ ನಮ್ಮ ರಾಷ್ಟ್ರದ ಜೀವನದಲ್ಲಿ ಒಂದು ಮಹತ್ತ್ವರವಾದ ಅತಿ ಮುಖ್ಯ ಪಾತ್ರವನ್ನು ವಹಿಸುತ್ತಾ ಇದೆ. ಯಾವ ರಾಷ್ಟ್ರದಲ್ಲೇ ಆಗಲಿ ಆ ರಾಷ್ಟ್ರದ ಜನತೆಯ ನಡೆ-ನುಡಿ, ಆಚಾರ-ವ್ಯವಹಾರ, ಭಾಷಾಜ್ಞಾನ ಮತ್ತು ಉದ್ಯೋಗ ಪ್ರತಿಯೊಂದೂ ಸಹ ಅಲ್ಲಿನ ವಿದ್ಯಾಭ್ಯಾಸದ ಮೇರೆ ನಿಂತಿರುತ್ತದೆ. ನಮ್ಮ ದೇಶದಲ್ಲಿ ಒಂದು ಐತಿಹಾಸಿಕ ಕಾರಣದಿಂದಾಗಿ, ಪೂರ್ವದಿಂದ ನಡೆದುಕೊಂಡು ಬಂದಿರತಕ್ಕ ವಿದ್ಯಾಭ್ಯಾಸ ಕ್ರಮಕ್ರಮವಾಗಿ ಪರಕೀಯರ ವಿದ್ಯಾಭ್ಯಾಸಕ್ಕೆ ಸ್ಥಳ ಮಾಡಿಕೊಟ್ಟಿತು ಮತ್ತು ನಾವು ಇಂದು ಒಂದು ದಾರಿ ಕವಲೊಡೆಯುವ ಸ್ಥಳದಲ್ಲಿ ನಿಂತಿದ್ದೇವೆ ಎಂದು ಹೇಳಬಹುದು. ಬ್ರಿಟಿಷರು ನಮ್ಮನ್ನು ಬಿಟ್ಟುಹೋಗಿದ್ದಾರೆ. ಹೋಗುವಾಗ ಹಿಂದುಗಡೆಯಲ್ಲಿ ಅವರ ಒಂದು ಭಾಷೆಯನ್ನೂ ಒಂದು ವಿದ್ಯಾಭ್ಯಾಸದ ಕ್ರಮವನ್ನೂ ನಮ್ಮ ದೇಶದಲ್ಲಿ ಬಿಟ್ಟು ಹೋಗಿದ್ದಾರೆ. ಈಗ 30 ವರ್ಷಗಳಿಂದೀಚೆಗೆ ನಮ್ಮ ದೇಶದ ಒಂದು ಆರ್ಥಿಕ ಮಟ್ಟ ಮತ್ತು ಜನಸಂಖ್ಯೆಯ ಮೇರೆ ಅದನ್ನು ಮಾರ್ಪಾಡುಮಾಡಬೇಕು, ರಾಷ್ಟ್ರದ ಜನಜೀವನವನ್ನು ರೂಪಿಸತಕ್ಕ ಒಂದು ವಿದ್ಯಾಭ್ಯಾಸವನ್ನಾಗಿ ಅದನ್ನು ಪರಿವರ್ತನೆಮಾಡಬೇಕು ಎಂಬುದಾಗಿ ಈಗಾಗಲೇ ಅನೇಕ ತಜ್ಞರು ಮತ್ತು ರಾಷ್ಟ್ರವಾದಿಗಳು ನಮಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಈಗಿರತಕ್ಕ ಒಂದು ಪದ್ಧತಿಯನ್ನು ರೂಢಮೂಲವಾಗಿ ಅಥವಾ ಕ್ರಾಂತಿಕಾರಕವಾಗಿ ಬದಲಾವಣೆಮಾಡಬೇಕಾದರೆ ಅದು ಬಹಳ ದಾಸ್ಯ್ರದ ಕೆಲಸ ಮತ್ತು ಅವಕ್ಕೆ ಎಲ್ಲರೂ ಸಹಕಾರ ನೀಡಿದ ಹೊರತು ಸಾಧ್ಯವಾಗದು, ವಿದ್ಯಾರ್ಥಿಗಳ ಸಹಕಾರ ಬೇಕು, ತಂದೆತಾಯಿಗಳ ಸಹಕಾರ ಬೇಕು. ವಿದ್ಯಾದಾನಮಾಡತಕ್ಕ ಉಪಾಧ್ಯಾಯರ ಸಹಕಾರ ಬೇಕು, ಮೇಲಾಗಿ ವಿದ್ಯಾಭ್ಯಾಸವನ್ನು ನಡೆಸಿಕೊಂಡು ಹೋಗುವುದಕ್ಕೆ ಹಣವನ್ನು ಒದಗಿಸತಕ್ಕ ಸಂಸ್ಥೆ, ಸರ್ಕಾರ ಆ ಒಂದು ಹೊರೆಯನ್ನು ಹೊರಬೇಕು. ಈ ಪರಿಸ್ಥಿತಿಯಲ್ಲಿ ಬದಲಾವಣೆಮಾಡಬೇಕು ಎಂಬುದು ಬಹಳ ಜನರ ಅಭಿಪ್ರಾಯವಾದರೂ ಕೂಡ ಈಗಿರತಕ್ಕ ಪದ್ಧತಿಯಲ್ಲಿ ಯಾವ ಬದಲಾವಣೆಮಾಡಬೇಕೆಂಬ ವಿಷಯದಲ್ಲಿ ಇನ್ನೂ ಒಂದು ತೀರ್ಮಾನಕ್ಕೆ ಬಂದಿಲ್ಲ. ಇದು ಬಹಳ ಗಹನವಾದ ವಿಷಯ. ಮತ್ತು ನಮ್ಮ ಜೀವನವನ್ನೇ ಪೂರ್ಣ ಮಾರ್ಪಾಟುಮಾಡತಕ್ಕ ವಿಷಯ. ಈಗ ನಾವು ಪರಿಶೀಲನೆಮಾಡಿ ನೋಡಿದರೆ ನಮ್ಮ ದೇಶದಲ್ಲಿ ಕಳೆದ 100–200 ವರ್ಷಗಳಿಂದ ನಾವು ಪಡೆದ ವಿದ್ಯಾಭ್ಯಾಸದ ಫಲವಾಗಿ ಇವೊತ್ತು ನಾವು ಎಷ್ಟೋ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಇವೊತ್ತು ಒಂದು ಕಡೆಯಿಂದ ವಿದ್ಯಾಭ್ಯಾಸಕ್ಕೆ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರುತ್ತಾ ಇದ್ದಾರೆ. ಆ ರೀತಿ ಹೆಚ್ಚು ಸಂಖ್ಯೆಯಲ್ಲಿ ಬರತಕ್ಕ ವಿದ್ಯಾರ್ಥಿಗಳಿಗೆ ಎಸ್. ಎಸ್. ಎಲ್.ಸಿ. ಯಲ್ಲಿ ಇ. ಸಿ. ಪಿ. ಎಸ್. ಕೊಟ್ಟರೆ ಅವರನ್ನು ಕಾಲೇಜಿಗೆ ಸೇರಿಸಲು ಅಷ್ಟು ಕಾಲೇಜುಗಳು ನಮ್ಮಲ್ಲಿ ಇಲ್ಲ. ಈ ಒಂದು ವಿದ್ಯಾಭ್ಯಾಸ ಕೊನೆಯವರೆಗೂ, ಸಾಮಾರ್ಥ್ಯವಿರುವಷ್ಟೂ ಕೊಡೋಣ ಎಂದರೆ ಮತ್ತೆ ಒಂದು ಅಂಥದೇ ದೊಡ್ಡ ಪ್ರಶ್ನೆ ಎದ್ದು ನಿಲ್ಲುತ್ತದೆ.

ಇದಕ್ಕೆ ಕಾರಣ, ನಮ್ಮಲ್ಲಿ ಬೆಳೆದುಬಂದಿರುವ ಒಂದು outlook ಅಥವಾ ಮನೋಭಾವ; ತಂದೆತಾಯಿಗಳಲ್ಲಲ್ಲದೆ ವಿದ್ಯಾರ್ಥಿಗಳಲ್ಲೂ ಕೂಡ ಇದು ಇದೆ. ಏನೆಂದರೆ, ಈ ಹೊತ್ತು ಹೆಚ್ಚು ವಿದ್ಯಾಭ್ಯಾಸ ಪಡೆದಿರತಕ್ಕಂಥವರೇ ಮುಂದೆ ಜೀವನದಲ್ಲಿ ಹೆಚ್ಚು ಅವಕಾಶವನ್ನು ಪಡೆಯಕ್ಕವರು ಮತ್ತು ಅವರಿಗೇ ಸಮಾಜದಲ್ಲಿ ಘನತೆ ಗೌರವ ದೊರೆಯತಕ್ಕಂಥಾದ್ದು ಎಂಬ ಭಾವನೆ ಮೂಡಿದೆ. ಅದಕ್ಕಾಗಿಯೇ ತಾನು ಸಾಕಷ್ಟು ಉಚ್ಚಶಿಕ್ಷಣ ಪಡೆಯಬೇಕು, ಬಿ.ಎ., ಎಂ.ಎ., ಡಿಗ್ರಿಗಳನ್ನು ಪಡೆಯಬೇಕೆಂಬ ಮನೋಭಾವ ಸಹಜವಾಗಿಯೇ ಎಲ್ಲರಲ್ಲೂ ಹುಟ್ಟಿದೆ. ಆದರೆ ಈ ಹೊತ್ತು ಸಮಾಜದ, ದೇಶದ ಸಂಪತ್ತನ್ನು ಮತ್ತು ವಿದ್ಯಾಸಂಸ್ಥೆಗಳ ಪರಿಮಿತಿಯನ್ನು ನೋಡಿಕೊಂಡರೆ ಅವರೆಲ್ಲರಿಗೂ ಸರ್ಕಾರದಲ್ಲ ಸ್ಥಳಗಳನ್ನು ಕಲ್ಪಿಸಿಕೊಡುವುದಕ್ಕಾಗುವುದಿಲ್ಲ. ಒಂದು ಉದಾಹರಣೆ ಸೂಚಿಸುವುದಾದರೆ, ಮೆಡಿಕಲ್ ಸ್ಕೂಲಿನಲ್ಲಿ 100 ವಿದ್ಯಾರ್ಥಿಗಳಿಗೆ ಸ್ಥಾನ ಕೊಡಬಹುದೆಂದು ಹೇಳಿದರೆ, ಅದಕ್ಕೆ 1,700 ಜನ ಅಭ್ಯರ್ಥಿಗಳು ಬಂದರೆ, ಈ ಸಮಸ್ಯೆಯನ್ನು ಯಾವ ರೀತಿ ಪರಿಹರಿಸಬೇಕೆಂಬುದನ್ನು ನೀವೇ ಯೋಚನೆಮಾಡಬೇಕು. ಇದಕ್ಕೆ ಕಾರಣವೇ ನೆಂಬುದನ್ನು ಹೇಳಬೇಕಾಗಿಲ್ಲ. ಒಂದು ಕಡೆ ಈ ಕಷ್ಟ ಪರಿಸ್ಥಿತಿ ದಿನೇದಿನೇ ಉಲ್ಬಣಿಸುತ್ತಿದೆ. ಇನ್ನೊಂದು ಕಡೆ ಯೂನಿವರ್ಸಿಟಿಗಳಲ್ಲಿ ಮತ್ತು ಕಾಲೇಜುಗಳಲ್ಲ ಪಾಸಾಗುವವರ ಸಂಖ್ಯೆಯನ್ನು ನೋಡಿದರೆ ಅಲ್ಲ ತೇರ್ಗಡೆಯಾಗುವವರ ಸಂಖ್ಯೆ ತೀರಾ ಕಡಮೆ. ಈ ವಿದ್ಯಾಭ್ಯಾಸಕ್ಕೆ ಇಷ್ಟು ಹೆಚ್ಚು ಖರ್ಚುಮಾಡಿದರೂ ಇಷ್ಟು ಕಡಮೆ ಸಂಖ್ಯೆಯಲ್ಲಿ—ಶೇಕಡ 15ರಷ್ಟು, 20 ರಷ್ಟು ಪಾಸಾಗಿದ್ದಾರೆಂದರೆ ಸರ್ಕಾರದ ಹಣ ಎಷ್ಟು ವ್ಯರ್ಥವಾದಂತಾಯಿತು! ಹೆಚ್ಚು ಜನರು ಪಾಸಾಗದಂತೆಮಾಡಿ ಮುಂದೆ ಹೆಚ್ಚು ಜನರು ಕಾಲೇಜಿಗೆ ಬಾರದಿರಲು ಮತ್ತು ಈಗಿನ ಹುಡುಗರಿಗೆ ಸರಿಯಾದ Standard ಇಲ್ಲ, ಆದ್ದರಿಂದ ಪರೀಕ್ಷೆಯನ್ನು ಸ್ವಲ್ಪ ಕಠಿಣವಾಗಿ ಮಾಡಬೇಕೆಂಬ ನೀತಿಯಿದ್ದರೂ ಕೂಡ, ಈ ರೀತಿಯಾಗಿ ವಿದ್ಯಾರ್ಥಿಗಳನ್ನು ಇಟ್ಟುಕೊಂಡು, ಪರೀಕ್ಷೆಗಳಲ್ಲಿ ಕಡಮೆ ಸಂಖ್ಯೆಯಲ್ಲಿ ಪಾಸುಮಾಡಿಸುವುದು ದೇಶದ ಹಿತದೃಷ್ಟಿಯಿಂದ, ಮಕ್ಕಳ ವಯಸ್ಸಿನ ದೃಷ್ಟಿ